re : Power shortages in the State.

SRI M. V. RAJAESHKARAN.—I call the attention of the Chief Minister to the grave situation arising out of power shortages in the State due to non taking of timely and adequate steps to get power from neighbouring States.

† SRI R. GUNDU RAO (Chief Minister).—I would like to make the following Statement.

The failure of the monsoon of 1979 in the Sharavathi catchment and the delay in the commissioning of the Kalinadi project have reduced the availability of electric energy by more than 1,100 million units during the 9 month period October 1979 to June 1980 compared to the corresponding period of the previous year. The deficit would have been much higher, if additional imports had not been arranged, particularly from Kerala and some small generation had not at last become possible in the two new power houses commissioned in 1979-80

2. The reduced supply has been distributed to the various categories of consumers during October 1979 – June 1980 such that supplies have been made in full to homes, irrigation pumps. drinking water facilities, essential services and industries, all small industry and intermediate-size industry upto 150 KVA, contract demand. All industrial units above 250 KVA, 265 in all, have had to share 1368 million units of energy after providing 1738 million units for the above uses. The same 265 industries had consumed 1,444 million units during the corresponding period of the previous year and new industries/expansions commissioned in 1979-80 needed an additional 325 million units adding upto a total requirement of 2,768 million units against actual availability of 1386 million units. The cut on these industries, therefore, had to be an average 50%.

3, The actual cut imposed on these industries from October 1979 ranged from 42% to 60%, the higher cut falling on the more power-intensive industries. Some additonal energy... ..was also allotted to about 100 high-employment industries, such as electronics, textiles, sugar, engineering and food products. The cement industry's allocation was also raised by about 50% as more cement was required for irrigation and power projects.

4. It has not been possible, within the available energy to give any further energy to about 160 power-intensive industries such as fertiliser, chimicals, steel, alluminium and paper. Most of them are operating at low capacities or having worked at higher capacities in the first few months, have exhausted their 9 month allotment and have shut down their operations or are on the verge of closing down in March 1980.

5. There is no way of helping such industries unless additional power can be imported from neighbouring States. We are making continuous efforts to secure more power from such States but we have not so far been successful as those States themselves are suffering from shortage of power. Kerala, however, has been supplying about 3 million units per day and we are in touch with them with a view to raising their supplies.

6. In these difficult circumstances, our only consolation is that labour in all small industries and about 80% of the labour in big-size industries have been spared. Industries which will have to close down will account for a little less than 10% of the total industrial lobour force.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ಈಗ ಮಾನ್ಯ ಮುಖ್ಯ ಮಂತ್ರಿಗಳು ಏನು ಕೆಲವು ವಿಚಾರಗಳನ್ನು ತಿಳಿಸಿದರು. ಅದು ಎಲ್ಲರಿಗೂ ಗೊತ್ತಿರುವ ವಿಚಾರಗಳಿವೆ. ತಮಗೆ ಹೇಳುವುದಾದರೆ, ೧೯೭೯ನೇ ಇಸವಿ ಮೇ ತಿಂಗಳಲ್ಲಿ ಹವಾಮಾನ ಇಲಾಖೆಯವರು, ಮುಂದೆ ಬರತಕ್ಕಂಥ ಮಾನ್‌ಸೂನ್ ಏನಿದೆ, ಆ ಸಮಯದಲ್ಲಿ ಒಳ್ಳೆಯ ಮಳೆ ಬರತಕ್ಕಂಥ ಅವಕಾಶವಿಲ್ಲದಿರುವುದರಿಂದ ಈ ಬಗ್ಗೆ ಜಾಗ್ರತೆ ವಹಿಸಿ ಬೇರೆ ಬೇರೆ ವಿಧಾನದಿಂದ ವಿದ್ಯುಚ್ಛಕ್ತಿ ಉತ್ಪಾದಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲಾ ರಾಜ್ಯ ಗಳಿಗೂ ವಾರನ್ ಮಾಡಿದರು. ಅವರು ಹೇಳಿದ ಪ್ರಕಾರ ಮುಂಗಾರು ಮಳೆ ಸರಿಯಾಗಿ ಬರದೆ ಕೆರೆಗಳು ತುಂಬಲಿಲ್ಲ. ಇದು ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಏತಕ್ಕೆ ಸರಿಯಾದ ಕ್ರಮ ಕೈಗೊಳ್ಳಲಿಲ್ಲವೆಂದು ಕೇಳುತ್ತೇನೆ? ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ವಿಚಾರ ಎಲ್ಲರಿಗೂ ಗೊತ್ತಿರುವ ವಿಚಾರ. ಇದು ಇಡೀ ದೇಶಕ್ಕೇ ವ್ಯಾಪಕವಾಗಿರುವ ವಿಚಾರ. ಆದರೂ ಸಹ ಈ ಒಂದು ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ ಎಂಬುದೇ ನಮ್ಮ ಮುಂದಿರುವ ಮುಖ್ಯವಾದ ಪ್ರಶ್ನೆ ಇವೊತ್ತಿನ ದಿವಸ ವಿದ್ಯುಚ್ಛಕ್ತಿಯ ಕೊರತೆ ಇರುವಾಗ ಥರ್ಮಲ್ ವಿದ್ಯುಚ್ಛಕ್ತಿ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ವಿದ್ಯುತ್ ಪಡೆಯಲು ಪ್ರಯತ್ನ ಮಾಡಬೇಕಾಗುತ್ತದೆ. ಎರಡನೆ ಯದಾಗಿ ಗ್ಯಾಸ್-ಟರ್ಬೈನ್ ಮೂಲಕ ವಿದ್ಯುಚ್ಛಕ್ತಿ ಪಡೆದುಕೊಳ್ಳಲು ಪ್ರಯತ್ನ ಮಾಡಬೇಕಾಗುತ್ತದೆ. ಈ ಎರಡು ಪ್ರಯತ್ನಗಳ ಜೊತೆಗೆ ನಮ್ಮ ಪಕ್ಕದ ರಾಜ್ಯಗಳಿಂದ ವಿದ್ಯುತ್ ಪಡೆದುಕೊಳ್ಳಲು ಪ್ರಯತ್ನ ಮಾಡಬೇಕಾಗುತ್ತದೆ. ಈಗ ನಮ್ಮ ಪಕ್ಕದ ರಾಜ್ಯವಾದ ಕೇರಳಾದಿಂದ ತಮಿಳುನಾಡಿನವರು ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಪಡೆಯುತ್ತಿದ್ದಾರೆ. ಅದೇರೀತಿ ನಮ್ಮ ರಾಜ್ಯದವರು ಅಲ್ಲಿಂದ ಪಡೆದು ಕೊಳ್ಳಲು ಏತಕ್ಕೆ ಸಾಧ್ಯವಾಗಿಲ್ಲ? ಈಗ ಕೇರಳದಿಂದ ವಿದ್ಯುತ್ ಪಡೆಯಲು ಅಲ್ಲಿನ ಸರ್ಕಾರದ ಜೊತೆ ಯಲ್ಲಿ ವ್ಯವಹಾರ ಮಾಡುತ್ತಿದ್ದೇವೆಂದು, ಅದಕ್ಕಾಗಿ ಪ್ರಯತ್ನ ಮಾಡುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಇಂತಹ ಒಂದು ಪರಿಸ್ಥಿತಿ ಬರುತ್ತದೆ ಎಂಬ ವಿಚಾರ ಸರ್ಕಾರಕ್ಕೆ ೧೦-೧೧ ತಿಂಗಳ ಹಿಂದೆಯೇ ಗೊತ್ತಾಗಿತ್ತು, ಆದರೂ ಕೂಡಲೇ ಕ್ರಮ ತೆಗೆದುಕೊಳ್ಳದ ಕಾರಣ ಇವೊತ್ತಿನದಿವಸ ೩೦-೪೦ ಸಾವಿರ ಕಾರ್ಮಿಕರಿಗೆ ಕೆಲಸವಿಲ್ಲದಂತೆ ಆಗಿದೆ. ಈ ತಿಂಗಳ ೧೯ನೇ ತಾರೀಖಿ ನಿಂದ ಮೈಸೂರು ಪೇಪರ್ ಮಿಲ್‌ನ್ನು ಇದೇ ಕಾರಣಕ್ಕಾಗಿ ಬಂದ್ ಮಾಡಿದ್ದಾರೆ. ಇದರಿಂದ ಅಲ್ಲಿನ ೩ ಸಾವಿರ ಕಾರ್ಮಿಕರಿಗೆ ಕೆಲಸವಿಲ್ಲದಂತೆ ಆಗಿದೆ. ಆದರೂ ಇದರ ಒಂದು ತೀವ್ರತೆಯನ್ನು ಸರ್ಕಾರ ಅರಿತಿಲ್ಲವೆಂದು ಕಾಣುತ್ತದೆ. ಇದರಿಂದ ಮುಂದೆ ಎಷ್ಟು ಅನಾಹುತಗಳಾಗಬಹುದೆಂಬುದನ್ನು ಈ ಸರ್ಕಾರ ಗಮನಿಸುವುದು ಒಳ್ಳೆಯದು.

೩--೦೦ ಪಿ. ಎಂ.

ಅದಲ್ಲದೇ ಇವತ್ತಿನ ದಿವಸ ಪರೀಕ್ಷೆಗಳು ಬಹಳ ಶೀಘ್ರವಾಗಿ ನಡೆಯಬೇಕಾಗಿದೆ. ಕಾಲೇಜಿಗೆ ಹೋಗತಕ್ಕಂತ ವಿದ್ಯಾರ್ಥಿಗಳಿಗೆ ಹೈಸ್ಕೂಲಿಗೆ ಹೋಗತಕ್ಕಂತ ವಿದ್ಯಾರ್ಥಿಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಎಕ್ಸೈಜ್, ನೋಟ್‌ಬುಕ್‌ಗಳು ಬೇಕಾಗುತ್ತವೆ. ಒರೆಯತಕ್ಕಂತ ಕಾಗದಗಳು ಬೇಕಾಗುತ್ತದೆ ಇದನ್ನು ನಾನು

೩ ತಿಂಗಳಿಂದ ಕೇಳಿದ್ದೇನೆ. ಇವತ್ತು ಭದ್ರಾವತಿಯ ಮೈಸೂರು ಪೇಪರ್ ಮಿಲ್‌ನ್ನು ಮುಚ್ಚಬೇಕು ಎಂದು.....

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ಮೋಷನ್ ಮೇಲೆ ಪ್ರಸ್ತಾಪಿಸುವಾಗ ಕೇವು ರೀಸ್ಟ್ರಿಕನ್ಸ್, ಇದೆ. ಆದ್ದರಿಂದ ತಾವು ಯಾವ ವಿಚಾರದಲ್ಲಿ ಮಾಹಿತಿಯನ್ನು ಕೇಳಬೇಕೋ ಅದನ್ನು ಮಾತ್ರ ಕೇಳಿ.

ಶ್ರೀ ಎಂ.ವಿ. ರಾಜಶೇಖರನ್.—ಸ್ವಾಮಿ, ಇದರ ತೀವ್ರತೆಯು ಅರಿವು ಇವತ್ತಿನ ದಿವಸ ಸರ್ಕಾರಕ್ಕೆ ಇಲ್ಲ ಎಂದು ನನಗನ್ನಿಸುತ್ತಾ ಇದೆ. ಆದ್ದರಿಂದ ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಯವರು ಈ ವಿಶೆಯಲ್ಲಿ ಏನೋ ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದರೆ ಈ ಸಮಸ್ಯೆಯನ್ನು ಮುಂದೆ ಹೇಗೆ ಬಗೆಹರಿಸುತ್ತಾರೆ ಎಂಬುದು ಮುಖ್ಯ. ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಒಂದು ವಿಚಾರವನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಯಚೂರು ಥರ್ಮಲ್ ಪ್ರಾಜೆಕ್ಟ್ ಸ್ಯಾಂಕ್ಷನ್ ಆಗಿವೆ. ಇವತ್ತು ದೇಶದಲ್ಲಿ ನಡೆಯತಕ್ಕಂಥ ಥರ್ಮಲ್ ಪ್ರಾಜೆಕ್ಟ್‌ಗಳು ೪೦ ಮೆಗಾವ್ಯಾಟ್ ಕೆಪಾಸಿಟಿ ಯಲ್ಲಿ ಮಾತ್ರ ನಡೆಯತಕ್ಕಂಥವುಗಳಾಗಿವೆ. ಕಾರಣವೇನೆಂದರೆ ಇದಕ್ಕೆ ಕೋಲ್ಡ್ ಸ್ಟೋರೇಜ್ ಇರುವು ದಿಲ್ಲ. ಅಲ್ಲದೇ ಇದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಾ ಇಲ್ಲ. ಇದನ್ನು ಸರಿಯಾದ ರೀತಿ ಯಲ್ಲಿ ನಡೆಸುವುದಕ್ಕೆ ನಿಮ್ಮ ಜನಗಳನ್ನು ನೀವು ಕಳಿಸಿಕೊಟ್ಟಿದ್ದೀರಾ? ನೀವು ಏತಕ್ಕೆ ಅವರನ್ನು ಕಳಿಸಿ ಕೊಡಲಿಲ್ಲ? ಇನ್ನು ಎರಡನೆಯ ವಿಚಾರವೇನೆಂದರೆ ನಮ್ಮ ದೇಶದಲ್ಲಿ ಮುಂಗಾರು ಮಳೆ ಬರದೇ ಇರಥಕ್ಕಂಥಾದ್ದು. ಇದು ನಮ್ಮ ದೇಶದ ಜನರ ಜೀವನದಲ್ಲಿ ಹಾಸುಹೊಕ್ಕಾಗಿ ಇರುವುದರಿಂದ ಅದು ಸಕಾಲದಲ್ಲಿ ಬರದೇ ಜನಗಳಿಗೆ ತುಂಬಾ ತೊಂದರೆಯನ್ನುಂಟು ಮಾಡಿದೆ. ಸರ್ಕಾರದವರು ಈ ಹೈಡಲ್ ಪ್ರಾಜೆಕ್ಟನ್ನು ಮತ್ತು ಪವರ್ ಜನರೇಷನ್ ಅನ್ನು ಶೀಘ್ರವಾಗಿ ಮಾಡುತ್ತೇವೆ ಎಂದು ಹೇಳುತ್ತಾ ಬಂದಿ ದ್ದಾರೆ ಈಗಿರತಕ್ಕಂಥ ಸನುಸ್ಥೆಯನ್ನು ಬಗೆಹರಿಸಬೇಕಾದರೆ ಹೈಡಲ್ ಪ್ರಾಜೆಕ್ಟ್, ಥರ್ಮಲ್ ಪ್ರಾಜೆಕ್ಟ್ ಮತ್ತು ಪವರ್ ಜನರೇಷನ್ ಅನ್ನು ಶೀಘ್ರವಾಗಿ ಮಾಡಬೇಕಾಗಿದೆ. ಈ ವಿಚಾರದಲ್ಲಿ ಸರ್ಕಾರದವರ ಯೋಜನೆ ಏನಿದೆ ಎಂಬುದನ್ನು ತಿಳಿಸಬೇಕು. ಮತ್ತು ಈ ಗ್ಯಾಸ್ ಟರ್ಬೈನ್ ವಿಚಾರ ದಲ್ಲಿ ಸರ್ಕಾರದವರ ಕಾರ್ಯಕ್ರಮ ಏನು ಎಂಬುದನ್ನು ತಿಳಿಸಬೇಕು. ಇದರ ಜೊತೆಗೆ ನಮ್ಮ ರಾಜ್ಯ ದಲ್ಲಿರತಕ್ಕಂಥ ಪವರ್ ಷಾರ್ಟೇಜನ್ನು ಸರ್ಕಾರದವರು ಹೇಗೆ ಬಗೆಹರಿಸುತ್ತಾರೆ ಎಂಬುದನ್ನೂ ಸಹ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಇದರ ಬಗ್ಗೆ ನಾವು ನೋಟೀಸ್ ಕೊಟ್ಟಿದ್ದೇವೆ. ಇದನ್ನು ಇವತ್ತು ಏತಕ್ಕೆ ಹಾಕಲಿಲ್ಲವೋ ಗೊತ್ತಿಲ್ಲ. ನಿನ್ನೆ ನಾನೂ ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಏಕೆಂದರೆ ಇದು ಬಹಳ ಮುಖ್ಯವಾದ ಪ್ರಶ್ನೆ. ಆದ್ದರಿಂದ ನಮಗೂ ಸಹ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಯವರಲ್ಲಿ ನಾನು ಒಂದೆರಡು ವಿವರ–ಣೆಗಳನ್ನು ಕೇಳಬಯಸುತ್ತೇನೆ. ಅವರ ಹೇಳಿಕೆಯ ಪ್ರಕಾರ ರಾಜ್ಯದಲ್ಲಿ ಇವತ್ತು ವಿದ್ಯುಚ್ಛಕ್ತಿಯ ಕ್ಷಾಮ ಗಂಭೀರವಾಗಿದೆ. ಪದೇ ಪದೇ ಪ್ರತಿವರ್ಷ ನಾವು ಇದೇ ರೀತಿ ಕೇಳುತ್ತಾ ಇರುತ್ತೇವೆ ಇದೇ ರೀತಿಯಾಗಿ ಅವರು ಉತ್ತರ ಹೇಳುತ್ತಾ ಇರುತ್ತಾರೆ. ನಾನು ಕೇಳುತ್ತಿರುವುದು ಏನೆಂದರೆ ನಮ್ಮ ರಾಜ್ಯ ಸರ್ಕಾರದವರು ಈ ವಿಚಾರದಲ್ಲಿ ಕೇರಳದೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಆ ಒಪ್ಪಂದದ ಪ್ರಕಾರ ನಮಗೆ ೮ ಮಿಲಿಯನ್ ಮೆಗಾವಾಟ್‌ನಷ್ಟು ವಿದ್ಯುಚ್ಛಕ್ತಿ ಬರಬೇಕಾಗಿತ್ತು ಎಂದು ನಾನು ಹೇಳುತ್ತಿದ್ದೇನೆ. ಕಳೆದ ವರ್ಷ ಮಾನ್ಯ ಕೆ. ಎಚ್. ಶ್ರೀನಿವಾಸ್‌ರವರು ಈ ಖಾತೆಯ ಮಂತ್ರಿ ಯಾಗಿದ್ದಾಗ ಈ ಬಗ್ಗೆ ಒಂದು ವಿವರಣೆ ಕೊಟ್ಟಿದ್ದರು ಈಗ ಆ ಒಪ್ಪಂದ ಏನಾಯಿತು? ಈಗ ಅವರನ್ನು ಮತ್ತೆ ಯಾವ ರೀತಿ ಕನ್‌ವಿನ್ಸ್ ಮಾಡುತ್ತೀರಾ ಎಂಬುದನ್ನು ತಾವು ಹೇಳಬೇಕು. ಸರ್ಕಾರ ದವರು ಹಿಂದೆ ಈ ಕಾಳಿ ವಿದ್ಯುಚ್ಛಕ್ತಿ ಯೋಜನೆಯ ಬಗ್ಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಅದೇನೆಂದರೆ ೧೯೮೦ರ ಹೊತ್ತಿಗೆ ಈ ಕಾಳಿ ವಿದ್ಯುಚ್ಛಕ್ತಿ ಯೋಜನೆ ಕೆಲಸ ಸಂಪೂರ್ಣವಾಗಿ ಪ್ರಾರಂಭ ವಾಗುತ್ತದೆ ಎಂದು. ಈಗ ಅದರ ಒಂದು ಯೂನಿಟ್ ಮಾತ್ರ ಪ್ರಾರಂಭವಾಗಿದೆ. ಆದರಿಂದ ೬೦ ಮೆಗಾವಾಟ್‌ನಷ್ಟು ವಿದ್ಯುಚ್ಛಕ್ತಿ ಬರುತ್ತದೆ ಎಂದು ಹೇಳುತ್ತಿದ್ದಾರೆ. ಅವರ ಕಾರ್ಯಕ್ರಮದಂತೆ

ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಮತ್ತು ಅದರಿಂದ ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ನಾನೂ ಕೂಡ ಈ ವಿಚಾರದಲ್ಲಿ ಒಂದು ನೋಟೀಸ್ ಕೊಟ್ಟಿದ್ದೇನೆ. ಈ ಬಗ್ಗೆ ಒಂದೆರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ, ಮಂಗಳೂರು ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಫ್ಯಾಕ್ಟರಿಯನ್ನು ೨ ತಿಂಗಳಿನಿಂದ ಮುಚ್ಚಿದ್ದಾರೆ. ವಿದ್ಯುಚ್ಛಕ್ತಿ ಇಲ್ಲದ ಕಾರಣದಿಂದ ಅಲ್ಲಿ ಕೆಲಸ ನಿಲ್ಲಿಸಿದ್ದಾರೆ. ಇದರ ಪರಿಣಾಮ ಏನಾಗುತ್ತಿದೆ ಎಂದರೆ, ಅಲ್ಲಿ ಯಂತ್ರಗಳ ಶಾಖ ಏನಿದೆ ಅದು ಒಮ್ಮೆ ಕೆಳಕ್ಕೆ ಬಂತು ಎಂದರೆ ಕೆಲಸ ಮಾಡುವುದಕ್ಕಾಗುವುದಿಲ್ಲ; ಅದು ಪುನಃ ಕೆಲಸ ಮಾಡಬೇಕಾದರೆ, ಅಲ್ಲಿ ಉತ್ಪಾದನೆ ಆಗಬೇಕಾದರೆ ಅದಕ್ಕೆ ಎಷ್ಟು ಶಾಖ ಬೇಕಾಗುತ್ತದೆಯೋ ಆ ಶಾಖಕ್ಕೆ ಏರಿಸಬೇಕಾದರೆ ಬಹಳ ವಿದ್ಯುಚ್ಛಕ್ತಿ ವೇಸ್ಟ್ ಆಗುತ್ತದೆ. ಒಂದು ವಾರದೊಳಗೆ ಅಲ್ಲಿಗೆ ವಿದ್ಯುಚ್ಛಕ್ತಿ ಒದಗಲಿಲ್ಲ ಎಂದರೆ ಲಕ್ಷಾಂತರ ರೂಪಾಯಿಗಳು ಅನಾವಶ್ಯಕವಾಗಿ ಹಾಳಾದಹಾಗೆ ಆಗುತ್ತದೆ. ಆದ್ದರಿಂದ ಅದಕ್ಕೆ ಪ್ರಥಮ ಪರಿಗಣನೆ ಕೊಟ್ಟು ಆ ಫ್ಯಾಕ್ಟರಿಯಲ್ಲಿ ಕೆಲಸ ಆರಂಭವಾಗುವ ಹಾಗೆ ತಾವು ಮಾಡಬೇಕಾಗುತ್ತದೆ. ಅಲ್ಲಿ ಸಾವಿರಾರು ಜನ ಕೆಲಸ ಮಾಡುತ್ತಾರೆ; ಅವರು ಮುಂದೆ ನಿರುದ್ಯೋಗಿಗಳಾಗುವ ಸಂಭವ ಕೂಡ ಇದೆ. ಆ ಫ್ಯಾಕ್ಟರಿಯನ್ನು ಪ್ರಾರಂಭ ಮಾಡದಿದ್ದರೆ ಮುಂದೆ ಉತ್ಪಾದನೆ ಮಾಡತಕ್ಕಾಂಥದ್ದೂ ಕಷ್ಟವಾಗುತ್ತದೆ. ಆಮೇಲೆ ಈ ಮೈಸೂರು ಪೇಪರ್ ಮಿಲ್ಸ್ ವಿಷಯ ಕೂಡ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ಅದೂ ಕೂಡ ವಿದ್ಯುಚ್ಛಕ್ತಿ ಇಲ್ಲದ ಕಾರಣ ಮುಚ್ಚಲ್ಪಟ್ಟಿದೆ. ಇದರಿಂದ ನಿರುದ್ಯೋಗದ ಸಮಸ್ಯೆ ಉದ್ಭವಿಸುವುದಲ್ಲದೇ ನಮ್ಮ ರಾಜ್ಯಕ್ಕೆ ದೊಡ್ಡ ತೊಂದರೆಯೇ ಉಂಟಾಗುತ್ತದೆ. ಬೆಂಗಳೂರು ಸಿಟಿಯಲ್ಲಿ ಇವತ್ತಿನದಿವಸ ಅನೇಕ ಫ್ಯಾಕ್ಟರಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಅವರು ಲೇ ಆಫ್ ಕೊಡುತ್ತಿದ್ದಾರೆ. ಕೆಲವರು ಕಾರ್ಮಿಕರಿಗೆ ನೋಟೀಸ್ ಕೊಡುತ್ತಿದ್ದಾರೆ ಇದಲ್ಲದೇ ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಫ್ಯಾಕ್ಟರಿಗಳು ಮುಚ್ಚುತಕ್ಕಂಥ ಪರಿಸ್ಥಿತಿಗೆ ಬಂದಿವೆ ಇದರಿಂದ ಆಗತಕ್ಕಂಥ ಅಪಾಯವೇನೆಂದರೆ ಕಾರ್ಮಿಕರಿಗೆ ನಿರುದ್ಯೋಗದ ಸಮಸ್ಯೆ ಬರುವುದು ಒಂದು ವಿಚಾರ; ಉತ್ಪಾದನೆ ಸಂಪೂರ್ಣವಾಗಿ ಸ್ಥಗಿತಗೊಳ್ಳುವುದು ಇನ್ನೊಂದು ವಿಚಾರ. ಮುಂದೆ ಅವು ಉತ್ಪಾದನೆ ಮಾಡಬೇಕಾದರೆ ಲಕ್ಷಾಂತರ ರೂಪಾಯಿಗಳ ದಂಡ ತೆರಬೇಕಾದಂಥ ಪರಿಸ್ಥಿತಿ ಬರುತ್ತದೆ. ಈಗ ಕೇರಳದಿಂದ ವಿದ್ಯುಚ್ಛಕ್ತಿ ಬರುತ್ತದೆಂದು ಸರ್ಕಾರದವರು ಹೇಳುತ್ತಿದ್ದಾರೆ. ಇದರಲ್ಲಿ ಏನಾಗುತ್ತಿದೆ ಎಂದರೆ ಕೇರಳದಿಂದ ಡೈರೆಕ್ಟ್ ಲೈನ್ ಇಲ್ಲದೇ ಇರುವುದರಿಂದ ಅದು ತಮಿಳುನಾಡಿನ ಪಾಯಿಂತರ ಬರಬೇಕಾದರೆ ಅವರು ಅಲ್ಲಿ ಹಿಡಿದು ಇಟ್ಟುಕೊಳ್ಳುತ್ತಾರೆ; ವಿದ್ಯುಚ್ಛಕ್ತಿಯನ್ನು ನಮಗೆ ಕೊಡುತ್ತಾ ಇಲ್ಲಾ. ೨ ವರ್ಷದಿಂದ ಈ ಒಂದು ತಕರಾರು ಬಂದಿದೆ. ಇದನ್ನು ತಾವು ಪರಿಹರಿಸಿಕೊಳ್ಳಬೇಕು. ತಾವು ಪ್ರಯತ್ನ ಮಾಡಿ ತಮಿಳುನಾಡಿನ ಸರ್ಕಾರದವರೊಡನೆ ಮಾತುಕತೆ ನಡೆಸಿ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು. ಅಲ್ಲದೇ ಕೇರಳ ಮತ್ತು ತಮಿಳುನಾಡಿನ ಜೊತೆಯಲ್ಲಿ ಮಾತುಕತೆ ನಡೆಸಿ ಅಲ್ಲಿ ಎಷ್ಟು ಸರ್‌ಪ್ಲಸ್ ವಿದ್ಯುಚ್ಛಕ್ತಿ ಇದೆ ಅದರಲ್ಲಿ ಹೆಚ್ಚಿನ ಭಾಗವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಮಂಗಳೂರು ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಫ್ಯಾಕ್ಟರಿ ಇರುವ ಕಡೆಯಲ್ಲಿ ಒಂದು ಥರ್ಮಲ್ ಪ್ಲಾಂಟನ್ನು ಆರಂಭ ಮಾಡುವುದಕ್ಕೆ ತಾವು ಈಗಲಾದರೂ ಪ್ರಯತ್ನ ಮಾಡಿದರೆ ಇನ್ನು ೪-೫ ವರ್ಷಗಳಲ್ಲಿ ಹೀಗೆ ಪದೇ ಪದೇ ವಿದ್ಯುಚ್ಛಕ್ತಿಯ ಕೊರತೆ ಬೀಳುವಂಥಾದ್ದನ್ನು ತಪ್ಪಿಸಬಹುದು. ಈ ಬಗ್ಗೆ ತಾವು ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ನ್ನು ಕರೆದು ಯೋಚನೆ ಮಾಡಿ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರದವರು ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI B. B. SAYANAK.—Sir, in Belgaum and Nippani there is insufficient and irregular electricity supply, with the result the Industries situated in and around Belgaum are suffering a lot and the industrial production has come to a halt. In this connection there was also an agitation led by our friend Sri B. G. Chavan to restore regular supply of electricity to Nippani Town. He has taken out a Morcha to the office electricity in Nipani 5000 People were in the

Morcha. The police have lathi charged and used lathi charged in Nippani. Some people were arrested by police. But the position has not improved till to-day. Therefore, I request the Government to appoint an Expert Committee and thrash out this problem.

ಶ್ರೀ ಎಸ್. ಎಂ. ಶೀರನ್ನಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡ ತಕ್ಕಂಥ ಕೆಲವು ಪ್ರಾಜೆಕ್ಟ್‌ಗಳು ಏನಿವೆ, ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಚಕ್ರ ಮತ್ತು ಸಣೆಹಕ್ಲು ಪ್ರಾಜೆಕ್ಟ್‌ಗಳು ಡ್ಯೂಡೇಟಿಗೆ ಸರಿಯಾಗಿ ಪೂರೈಸಿದ್ದರೆ ಇಷ್ಟು ವಿದ್ಯುಚ್ಛಕ್ತಿ ಅಭಾವ ಆಗುತ್ತಾ ಇರಲಿಲ್ಲ. ಇರಾನಿನಿಂದ ಬಂದ ಸಿಮೆಂಟ್ ಕಂದಾಪುರದ ಮುಖಾಂತರ ಹೋಗುತ್ತಾ ಇದೆ. ಸಬ್ ಸ್ಟ್ಯಾಂಡರ್ಡ್ ಸಿಮೆಂಟ್ ಹಾಕದೆ ಎಂಥರು ಬಾರಿ ಒಡೆದುಹೋಯಿತು. ಈಗ ಮತ್ತೆ ಮತ್ತೆ ಕಟ್ಟುತ್ತಿದ್ದಾರೆ. ಸುಮಾರು ೪೫ ಕೋಟಿ ರೂಪಾಯಿಯ ಯಂತ್ರಗಳನ್ನು ಫಾರಿನ್ ಕಂಟ್ರೀಸ್‌ನಿಂದ ಪರ್ಚೇಸ್ ಮಾಡಿ ದ್ದಾರೆ. ಇವುಗಳನ್ನು ಏಕೆ ಪರ್ಚೆಸ್ ಮಾಡಿದ್ದಾರೊ ಗೊತ್ತಿಲ್ಲ. ಏಕೆಂದರೆ, ಇಪತ್ತಿನವರೆಗೂ ಅವುಗಳ ಉಪಯೋಗ ಇಲ್ಲ. ಹಾಗೆ ಇವೆ. ಈ ಒಂದು ಅಜಾತುರ್ಯದಿಂದ ಅನೇಕ ಪ್ರಾಜೆಕ್ಟ್‌ಗಳು ನಿಧಾನವಾಗುತ್ತಾ ಇವೆ. ಡ್ಯೂಡೇಟಿಗೆ ಸರಿಯಾಗಿ ಈ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡದೇ ಇರುವುದರಿಂದ ಈ ಒಂದು ವಿದ್ಯುಚ್ಛಕ್ತಿ ಅಭಾವ ಉಂಟಾಗಿದೆ, ಡ್ಯೂಡೇಟಿಗೆ ಕಂಪ್ಲೀಟ್ ಮಾಡಿದ್ದರೆ ಅಭಾವವಾಗುತ್ತಾ ಇರಲಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಯ ವಿಷಯವಾಗಿ ಈಗಾಗಲೇ ನಮ್ಮ ಹಿರಿಯರೆಲ್ಲ ಮಾತನಾಡಿದ್ದಾರೆ. ಇನ್ನು ಮುಂದೆ ಬರತಕ್ಕಂಥ ದಿನಗಳಲ್ಲಿ ಎಲ್ಲಾ ಕಾರ್ಖಾನೆಗಳನ್ನು ನಿಲ್ಲಿಸತಕ್ಕ ಒಂದು ಪರಿಸ್ಥಿತಿ ಬರುತ್ತಾ ಇದೆ. ಏಕೆಂದರೆ ಮೊನ್ನೆಯ ದಿವಸ ಹರಿಹರ ಪಾಲಿಫೈಬರ್ ಕಾರ್ಖಾನೆಯನ್ನು ಬಂದ್ ಮಾಡಿದ್ದಾರೆ. ೨೨ವಿರ ಜನಕ್ಕೆ ಕೆಲಸ ಇಲ್ಲ. ದಾವಣಗೆರೆ ಕೂಡ ಕೈಗಾರಿಕಾ ಕೇಂದ್ರ, ಟೆಕ್ಸ್‌ಟೈಲ್ ಮಿಲ್ಸ್ ಇರತಕ್ಕ ಸ್ಥಳ. ಈಗಾಗಲೇ ಒಂದೊಂದು ಮಿಲ್ ಕೂಡ ಅರ್ಧರ್ಧ ಭಾಗ ಮಾತ್ರ ನಡೆಯುತ್ತಾ ಇದೆ. ಮುಂದೆ ಇನ್ನರ್ಧ ಕೂಡ ನಿಲ್ಲಿಸತಕ್ಕ ಪರಿಸ್ಥಿತಿ ಇದೆ. ಒಂದು ಕಡೆ ಪದಾರ್ಥಗಳ ಬೆಲೆ ಜಾಸ್ತಿಯಾಗುತ್ತಾ ಇದೆ, ಮತ್ತೊಂದು ಕಡೆ ದುಡಿಮೆ ಮಾಡತಕ್ಕ ಕೆಲಸಗಾರರಿಗೆ ದುಡಿಮೆ ಇಲ್ಲದೆ ಜೀವನಕ್ಕೆ ಕಷ್ಟವಾಗುತ್ತಾ ಇದೆ. ಇವೆರಡನ್ನೂ ನಿವಾರಣೆ ಮಾಡಬೇಕಾದರೆ ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿ ನಮಗೆ ಸಿಗಬೇಕು. ಹಿಂದೆ ನಮ್ಮ ರಾಜ್ಯದ ಸುಮಾರು ಅರ್ಧ ಭಾಗ ವಿದ್ಯುಚ್ಛಕ್ತಿ ನಮ್ಮ ಬೆಳಗಾವಿನ ಅಲ್ಯುಮಿನಿಯಂ ಫ್ಯಾಕ್ಟರಿಗೆ ಹೋಗುತ್ತಿತ್ತು. ಅಲ್ಲಿ ಒಂದೂವರೆ ಎರಡು ಸಾವಿರ ಜನ ಕೆಲಸ ಮಾಡುತ್ತಾರೆ. ಇಂಥಾ ಒಂದು ಸಂದರ್ಭದಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ ಅವರಿಗೆ ಕಾಂಪನ್ ಸೇಷನ್ ಕೊಟ್ಟು ಆ ವಿದ್ಯುಚ್ಛಕ್ತಿಯನ್ನು ಲಕ್ಷಾಂತರ ಜನ ಉದ್ಯೋಗ ಮಾಡತಕ್ಕಂಥ ಕಡೆ ಕೊಡುವುದಕ್ಕೆ ಹಿಂದೆ ವಿಚಾರ ಮಾಡುತ್ತಾ ಇದ್ದರು ಎಂದು ನನ್ನ ಗಮನಕ್ಕೆ ಬಂದಿದೆ. ಆದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು, ವಿದ್ಯುಚ್ಛಕ್ತಿ ಕೇರಳದಿಂದ ಬರಲಿ, ತಮಿಳುನಾಡಿನಿಂದ ಬರಲಿ ಅಥವಾ ಬರುವುದಕ್ಕೆ ಆಗಲಿಲ್ಲ ಅಂದರೆ ಇದನ್ನೂ ಕೂಡ ವಿಚಾರ ಮಾಡಬೇಕಾಗುತ್ತದೆ ಬೆಳಗಾವಿನಲ್ಲಿ ಅಲ್ಯುಮಿನಿಯಂ ಫ್ಯಾಕ್ಟರಿ ಏನಿದೆ, ಅದು ಅಂಥಾ ಆವಶ್ಯಕತೆ ಇದೆ, ಅಗತ್ಯವಾಗಿ ಬೇಕೇಬೇಕು ಎನ್ನುವುದಲ್ಲ, ಮತ್ತೆ ಹೆಚ್ಚಿನ ಜನರಿಗೆ ಕೆಲಸ ಒದಗಿಸತಕ್ಕ ಒಂದು ಕೈಗಾರಿಕೆಯೂ ಅಲ್ಲ. ನಮ್ಮ ರಾಜ್ಯದ ವಿದ್ಯುಚ್ಛಕ್ತಿಯನ್ನು ಬಹಳ ಕಡಿಮೆ ಬೆಲೆಗೆ ಒದಗಿಸುತ್ತಾ ಇದ್ದೇವೆ. ಇಂಥಾ ಒಂದು ಕೊರತೆ ಬಂದಂಥ ಸಂದರ್ಭದಲ್ಲಿ ಈ ಕೈಗಾರಿಕೆಗೆ ಕೊಡತಕ್ಕ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ ಅವರಿಗೆ ಕಾಂಪನ್‌ಸೇಷನ್ ಕೊಟ್ಟು ಇತರೆ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು.

ಅಧ್ಯಕ್ಷರು.—ಇದು ಗಮನ ಸೆಳೆಯುವ ಸೂಚನೆ. ಇದರ ಬಗ್ಗೆ ಸ್ಪಷ್ಟೀಕರಣ ಮಾತ್ರ ಕೇಳಬೇಕು. ಈ ರೀತಿ ಭಾಷಣ ಮಾಡಕೂಡದು.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಕೇರಳ ರಾಜ್ಯದಿಂದ ಜಾಗ್ರತೆ ವಿದ್ಯುಚ್ಛಕ್ತಿಯನ್ನು ತಂದು ಈ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ

ಮಾಡಿರುವುದು ಬಹಳ ಸಂತೋಷ. ಇಲ್ಲದೇ ಹೋದರೆ ಈ ವಿಷಯವನ್ನೂ ಕೂಡ ಗಮನದಲ್ಲಿಟ್ಟು ಕೊಂಡು ಕಾರ್ಯಗತ ಮಾಡಿದರೆ ಕಾರ್ಮಿಕರಿಗೆ ಅನುಕೂಲವಾಗುತ್ತದೆ, ಉತ್ಪತ್ತಿ ಹೆಚ್ಚುತ್ತದೆ, ಬೆಲೆ ಏರುವುದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಆರ್. ಗುಂಡೂರಾವ್.— ಮಾನ್ಯ ರಾಜಶೇಖರನ್‌ರವರು ಮತ್ತು ಇನ್ನಿತರ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಏನು ತೊಂದರೆ ಇದೆ ಎನ್ನುವುದನ್ನೂ ಸ್ಪಷ್ಟಪಡಿಸಿದ್ದೇನೆ. ಪುನಃ ಏಕೆ ಹೀಗಾಯಿತು ಏಕಾಯಿತು ಎಂದು ಹೇಳಿದ್ದಾರೆ. ನಾನೇನು ಇದನ್ನು ಮುಚ್ಚಿಟ್ಟಿಲ್ಲ, ಏಕಾಗಿದೆ ಎನ್ನುವುದನ್ನು ಉತ್ತರದಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಮುಂದಿನ ಕ್ರಮ ಏನು ಕೈಗೊಳ್ಳುತ್ತೀರಿ ಎಂದು ಕೇಳಿದ್ದಾರೆ. ರಾಯಚೂರು ಥರ್ಮಲ್‌ಪ್ಲಾಂಟ್ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮೊನ್ನೆ ರಾಷ್ಟ್ರಪತಿಯವರು ಉದ್ಘಾಟನೆ ಮಾಡಿ ಹೋಗಿ ದ್ದಾರೆ. ಇದಾದಮೇಲೆ ಅದು ಪ್ರಾರಂಭವಾಗಬೇಕಾದರೆ ೨-೩ ವರ್ಷ ಬೇಕಾಗುತ್ತದೆ ಮತ್ತೆ ಮಾನ್ಯ ಸದಸ್ಯರು ಟೆಕ್ನಿಕಲ್ ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ, ಸರ್ಕಾರದವರು ಆ ಕೆಲಸ ಪೂರೈಸಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರುಗಳಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಇದು ಎಲ್ಲರಿಗೂ ಬೇಕಾಗಿರುವ ಮತ್ತು ಸಂಬಂಧಪಟ್ಟ ಸಮಸ್ಯೆ. ಇದರಲ್ಲಿ ಯಾವುದೇ ರೀತಿಯ ನಿಧಾನ ಮಾಡುವ ಪ್ರಶ್ನೆ ಇಲ್ಲ. ಇದರಲ್ಲಿ ತಾಂತ್ರಿಕ ಕೊರತೆ ಇದೆ ಮತ್ತು ಹಣದ ಕೊರತೆ ಇದೆ, ಮತ್ತು ವಿದೇಶಗಳಿಂದ ಬರಬೇಕಾದಂಥ ಇಂಪೋರ್ಟ್ ತೊಂದರೆಯಾಗಿರುವುದರಿಂದ ನಿಧಾನವಾಗುತ್ತಾ ಇದೆ ಮಾನ್ಯ ಸದಸ್ಯರು ಮಂಗಳೂರು ಫರ್ಟಿಲೈಸರ್ ಫ್ಯಾಕ್ಟರಿ ಬಗ್ಗೆ ಹೇಳಿದರು, ಅದಕ್ಕೆ ತೊಂದರೆಯಾಗುವುದಿಲ್ಲ. ನಮ್ಮ ರಾಜ್ಯ ಒಂದಾನೊಂದು ಕಾಲದಲ್ಲಿ ಬೇರೆ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇತ್ತು, ಆದರೆ ಇವತ್ತು ಬೇರೆ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ತರಿಸಿಕೊಳ್ಳಬೇಕಾದಂಥ ಪರಿಸ್ಥಿತಿಯಲ್ಲಿದ್ದೇವೆ. ಕೇರಳದಿಂದ ಎಷ್ಟು ವಿದ್ಯುಚ್ಛಕ್ತಿ ಸಿಗಬೇಕೋ ಅಷ್ಟು ಸಿಗುತ್ತಾ ಇಲ್ಲ. ಕೇರಳದಿಂದ ಒಂದೇ ಒಂದು ಲೈನು ಇರುವುದರಿಂದ ತಮಿಳುನಾಡಿನ ಮೂಲಕವಾಗಿಯೇ ಪ್ರಯತ್ನ ಪಡಬೇಕಾಗುತ್ತದೆ. ಕೇರಳದಿಂದ ವಿದ್ಯುಚ್ಛಕ್ತಿ ಪಡೆಯುವುದಕ್ಕೆ ನಮ್ಮ ಅಧಿಕಾರಿಗಳು ಕೂಡ ಕೇರಳಕ್ಕೆ ಹೋಗಿ ಮಾತುಕತೆ ನಡೆಸಿ ಬಂದಿದ್ದಾರೆ. ನಾನೂ ಸಹ ೩ನೇ ತಾರೀಖು ಹೋಗಿ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ವಿದ್ಯುಚ್ಛಕ್ತಿ ಕೊರತೆ ನಿವಾರಣೆಗೋಸ್ಕರ ತಾತ್ಕಾಲಿಕ ಪರಿಹಾರ ವನ್ನು ಕಂಡುಹಿಡಿಯಬೇಕು ಎಂದು ಯೋಚನೆ ಮಾಡಿದ್ದೇನೆ. ಕೇರಳದಿಂದ ವಿದ್ಯುಚ್ಛಕ್ತಿ ತಮಿಳುನಾಡು ಮೂಲಕ ನಮ್ಮ ರಾಜ್ಯಕ್ಕೆ ದೊರಕಿ ಕೆಲವು ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಇಲ್ಲದೆ ಏನು ತೊಂದರೆಯಾಗಿದೆ ಅದನ್ನು ನಿವಾರಣೆ ಮಾಡುವ ಎಲ್ಲಾ ಪ್ರಯತ್ನವನ್ನೂ ಸರ್ಕಾರ ಮಾಡುತ್ತಾ ಇದೆ. ಆದಷ್ಟು ಬೇಗ ಈ ಒಂದು ಕೊರತೆ ನಿವಾರಣೆಯಾಗಬೇಕು ಎನ್ನುವ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸದಸ್ಯರು ನಮ್ಮಲ್ಲಿ ಉತ್ಪತ್ತಿಯಾಗಬೇಕಾಗಿದೆ, ಮಳೆ ಕಡಿಮೆಯಾಯಿತು, ಏಕೆ ಕಾರ್ಯಕ್ರಮ ಕೈಗೊಳ್ಳಲಿಲ್ಲ ಎಂದು ಹೇಳಿದ್ದಾರೆ ಒಂದೊಂದು ಸಾರಿ ಮಳೆ ಕಡಿಮೆಯಾಗುತ್ತದೆ, ಒಂದೊಂದು ಸಾರಿ ಮಳೆ ಜಾಸ್ತಿಯಾಗುತ್ತದೆ. ಇದನ್ನೆಲ್ಲಾ ಯೋಚನೆ ಮಾಡಿ ಮುನ್ನೆಚ್ಚರಿಕೆ ವಹಿಸಿ ದ್ದೇವೆ. ನಮ್ಮಲ್ಲಿ ಕಾರ್ಖಾನೆಗಳು ಹೆಚ್ಚಾಗಿ ಬರುತ್ತಾ ಇವೆ, ಜನಸಂಖ್ಯೆ ಹೆಚ್ಚಾಗುತ್ತಾ ಇದೆ, ಮತ್ತಿತರ ಕಾರಣಗಳಿಂದ ವಿದ್ಯುಚ್ಛಕ್ತಿಯ ಅವಶ್ಯಕತೆ ಜಾಸ್ತಿಯಾಗಿದೆ. ಕಾಳಿನದಿ ಪ್ರಾಜೆಕ್ಟನ್ನು ಈ ವರ್ಷ ಪ್ರಾರಂಭ ಮಾಡಿದರೂ ಹಂತಹಂತವಾಗಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತದೆ, ಇನ್ನೂ ಮೂರು, ನಾಲ್ಕು ವರ್ಷ ಆಗುತ್ತದೆ. ಬೇಡ್ತಿ ಯೋಜನೆ ಬಗ್ಗೆ ಪರಿಶೀಲನೆ ಮಾಡುತ್ತಾ ಇದ್ದೇವೆ. ಥರ್ಮಲ್ ಪ್ಲಾಂಟ್ಸ್ ಇನ್ನೂ ಜಾಸ್ತಿ ಹಾಕಲಿಕ್ಕೆ ಯೋಚನೆ ಮಾಡುತ್ತಾ ಇದ್ದೇವೆ. ಮಾನ್ಯ ಸದಸ್ಯರಾದ ರಾಜ ಶೇಖರನ್‌ರವರು ಗ್ಯಾಸ್ ಟರ್ಬೈನ್ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಅದಕ್ಕೆ ಆಯಿಲ್ ಕೊರತೆ ಇದೆ, ಮತ್ತೆ ವಿದೇಶಗಳ ನಿಯಮದ ಪ್ರಕಾರ ತೊಂದರೆ ಇದೆ, ಅಲ್ಲದೆ ಇದುವರೆಗೆ ಕೇಂದ್ರ ಸರ್ಕಾರದವರು ಅನುಮತಿ ಕೊಡಲಿಲ್ಲ, ಈಗ ಹೊಸದಾಗಿ ಕೇಂದ್ರ ಸರ್ಕಾರದ ಅನುಮತಿ ಪಡೆದುಕೊಂಡು ಮಾಡಬೇಕು, ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆಯನ್ನು ನಿವಾರಣೆ ಮಾಡಬೇಕೆಂ ಎನ್ನುವುದು ಸರ್ಕಾರದ ಉದ್ದೇಶ. ಮಾನ್ಯ ಸದಸ್ಯರುಗಳು ಈ ಬಗ್ಗೆ ಕೊಟ್ಟಿರತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಕಾರ್ಯ ಮುಂದುವರೆಯುತ್ತೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಮೂರು, ನಾಲ್ಕು ಸಲ ಕ್ಲಾರಿಫಿಕೇಷನ್ ಕೇಳಿದ್ದೀರಿ, ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಮತ್ತೆ ಕೇಳಿದರೆ ಹೇಗೆ. ಇದು ಗಮನ ಸೆಳೆಯುವ ಸೂಚನೆ. ಎರಡು ಮೂರು ಸಾರಿ ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಎಂ.ವಿ. ರಾಜಶೇಖರನ್.—ಯಾರೋ ಒಬ್ಬ ಸನ್ಯಾಸಿ ಸತ್ತ ಎಂದು ಅದರ ಬಗ್ಗೆ ಮಾತ ನಾಡುವುದಕ್ಕೆ ಗಂಟೆಗಳ ಕಾಲ ಅವಕಾಶ ಕೊಡುತ್ತೀರಿ. ಇದು ಜೀವನದ ಪ್ರಶ್ನೆ.

MR. SPEAKER.—It is not you who is going to regulate the time

ಶ್ರೀ ಎಂ.ವಿ. ರಾಜಶೇಖರನ್.—ರೆಗ್ಯುಲೇಟ್ ಮಾಡುವುದಕ್ಕೆ ನಮಗೆ ಗೊತ್ತಿದೆ. Further you are here to regulate time.

ಅಧ್ಯಕ್ಷರು.—ಶೌಟ್ ಮಾಡುವುದರಿಂದ ಏನೂ ಪ್ರಯೋಜನ ಇಲ್ಲ. Say what you want to say.

ಶ್ರೀ ಎಂ. ವಿ. ರಾಜಶೇಖರನ್.—ತಮ್ಮಲ್ಲಿ ನಾನು ಅತ್ಯಂತ ವಿನಯದಿಂದ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಇದು ಗಮನ ಸೆಳೆಯುವ ಸೂಚನೆ. ಈಗಾಗಲೇ ಇದರ ಬಗ್ಗೆ ಮೂರು, ನಾಲ್ಕು ಕ್ಲಾರಿಫಿಕೇಷನ್ ಕೇಳಿದ್ದೀರಿ. ಸಾಮಾನ್ಯವಾಗಿ ಒಂದೆರಡು ಕ್ಲಾರಿಫಿಕೇಷನ್ ಕೇಳಬೇಕು. ಈಗಾಗಲೇ ಮುಖ್ಯ ಮಂತ್ರಿಗಳು ಎರಡು ಸಲ ಉತ್ತರ ಕೊಟ್ಟಿದ್ದಾರೆ. ಈಗ ಎಷ್ಟು ಸಮಯ ಆಗಿದೆ. ಇನ್ನೂ ನಾಲ್ಕನೇ ಗಮನ ಸೆಳೆಯುವ ಸೂಚನೆಯನ್ನು ಕರೆದಿಲ್ಲ. ಅದಾದಮೇಲೆ ಮ್ಯಾಟರ್ ಅಂಡರ್ ರೂಲ್ ೩೧೨ ಇದೆ; ಆಮೇಲೆ ಲೆಜಿಸ್ಲೇಟಿವ್ ಬಿಸಿನೆಸ್ ಇದೆ. ತಾವು ಛೇರ್ ಜೊತೆ ಕೋ-ಆಪರೇಟ್ ಮಾಡ ಬೇಕು. ಕನ್‌ವೆನ್‌ಷನ್ ಬಿಟ್ಟು ಎರಡು ಸಲ, ಮೂರು ಸಲ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ ಅಂದರೆ ಹೇಗೆ. ಕನ್‌ವೆನ್‌ಷನ್ ಬಿಟ್ಟು ಹೋಗಬಾರದು.

ಎಗಡು ಮೂರು ಬಾರಿ ಆರಿಸಿ ಬಂದು ಈ ಸದನದಲ್ಲಿ ಕೆಲಸ ಮಾಡಿರತಕ್ಕ ನೀವು ಮಾದರಿಯಾಗಿ ನಡೆದುಕೊಳ್ಳಬೇಕು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ.ವಿ ರಾಜಶೇಖರನ್.—ತಮ್ಮಲ್ಲಿ ನಿವೇದಿಸಿಕೊಳ್ಳುತ್ತಿದ್ದೇನೆ. ತಮಗೂ ಈ ವಿಚಾರ ಗೊತ್ತಿದೆ. ಈ ಸಬ್ಜೆಕ್ಟ್‌ನಲ್ಲಿ ಎಂಥಾ ಮಹತ್ವವಿದೆ ಎಂದು ತಿಳಿದು ಮಾತನಾಡಲು ಎಷ್ಟು ಸಮಯಾವ ಕಾಶ ಕೊಡಬೇಕು ಎನ್ನುವುದು ನಿಮ್ಮ ಜವಾಬ್ದಾರಿಗೆ ಬಿಟ್ಟದ್ದು. ಅದರ ಮಹತ್ವದ ಮೇಲೆ ಜವಾಬ್ದಾರಿ ಅರಿತು ಪ್ರಶ್ನೆ ಕೇಳತಕ್ಕಂಥದ್ದು ಸದಸ್ಯರಿಗೆ ಸೇರಿದ್ದು. ಇಂಥಾ ಮಹತ್ವದ ವಿಚಾರಗಳು ಬಂದಾಗ ತಾವು ಸ್ವಲ್ಪ ಹೆಚ್ಚಿಗೆ ಕಾಲಾವಕಾಶವನ್ನು ಕೊಡುವುದು ಉತ್ತಮ.

ಆದಷ್ಟು ಮಟ್ಟಿಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿ ದ್ದಾರೆ. ಆದರೆ ಇದನ್ನು ವಾರ್ ಫುಟ್ಟಿಂಗ್ ರೀತ್ಯ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಬಹಳ ತೊಂದರೆ ಯಾಗುತ್ತದೆ. ಇಲ್ಲದಿದ್ದರೆ ನಮ್ಮ ರಾಜ್ಯದಲ್ಲಿರತಕ್ಕ ಕಾರ್ಮಿಕರ ಮತ್ತು ಸಾಮಾನ್ಯ ಜನಗಳ ಹಿತರಕ್ಷಣೆ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ತಾವು ಯುದ್ಧ ಕಾಲದಲ್ಲಿ ಯಾವ ರೀತಿಯ ವಿಪ್ಲಾಡನ್ನು ಮಾಡುತ್ತೀರೋ ಆ ರೀತಿಯಲ್ಲಿ ಮಾಡಿದರೆ ಮಾತ್ರ ಇದನ್ನು ಬಗೆಹರಿಸುವುದಕ್ಕೆ ಸಾಧ್ಯ ಅಂತ ಹೇಳಿ ಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅದನ್ನೇ ಹೇಳಿದ್ದೇನೆ. ನಮ್ಮ ರಾಜ್ಯಕ್ಕೆ ಕೊರತೆ ಇತ್ತೆಂದು ಹೇಳಿದ್ದೇನೆ. ಕಳೆದ ವರ್ಷ ಆದ ರೀತಿಯಲ್ಲಿ ಆಗಬಾರದು ಅಂತ ಸಲಹೆ ಕೊಟ್ಟಿದ್ದೀರಿ. ಆ ಕೊರತೆಯನ್ನು ನೀಗಿಸುವುದಕ್ಕೆ ನಾವು ಕೇಂದ್ರ ಸರ್ಕಾರದವರೊಡನೆ ಮತ್ತು ನೆರೆಯ ರಾಜ್ಯಗಳವರೊಡನೆ ವ್ಯವಹರಿಸಿ ಅತಿ ಶೀಘ್ರವಾಗಿ ಅದಕ್ಕೆ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇವೆ.